

ಗುನುಂಗ್ ಪದಾಂಗ್‌ನ ಐದೂ ಮಾಳಿಗೆಗಳಿಗೆ ಮಾರ್ಗದರ್ಶಕರಾದ 'ಕಾರ್ಯಮುಕ್ತಿ' ಹಳ್ಳಿಯ ಯುವಕ

ಆದರೆ ನಮ್ಮೊಡನೆ ಹೊರಟು ಬಿಡುವ ಪುರಸೊತ್ತು ಇರಲಿಲ್ಲ. ಆಕೆ ಹೇಳಿದರು, 'ನಾಳೆ ನನ್ನ ಕಾರು, ಡ್ರೈವರ್ ಕಳುಹಿಸುತ್ತೇನೆ, ಅವ ಗೂಗಲ್ ಹಾಕಿಕೊಂಡು ಕರೆದೊಯ್ಯುವ'.

ಗುನುಂಗ್ ಪದಾಂಗ್ ಜಕಾರ್ತಾದಿಂದ ಸುಮಾರು 145 ಕಿಲೋಮೀಟರ್ ದೂರದಲ್ಲಿದೆ. ಅಷ್ಟು ದೊಡ್ಡ ಉಪಕಾರ ಅವರಿಂದ ಪಡೆಯಲು ಸಂಕೋಚ. ಆದರೆ ನನ್ನ ಪ್ರತಿಭಟನೆಯನ್ನು ಕಿವಿಗೇ ಹಾಕಿಕೊಳ್ಳದೆ ಅಸ್ಮಾ ಮರುದಿನ ಕಾರು ಕಳುಹಿಸಿದ್ದರು.

## ಬೆಟ್ಟಗುಡ್ಡಗಳ ಹಾದಿ

ಮರುದಿನ ಬೆಳಗ್ಗೆ ಏಳು ಗಂಟೆಗೇ ಹೊರಡುವುದಿತ್ತು. ಆತ ಟ್ರಾಫಿಕ್‌ನಲ್ಲಿ ಸಿಕ್ಕಿಕೊಂಡು ಬರುವುದು ಕೊಂಚ ತಡವಾಯಿತು. ಬಂದೊಡನೆ ಉತ್ಸಾಹದಿಂದ ಹೊರಟೆವು. ಚಾಲಕ ಡೀಯನ್ ರಸ್ದಿಯಾನಾಗೆ ಇಂಗ್ಲಿಷ್‌ನ ಪದವೂ ಅರ್ಥವಾಗದೆಂದು ತಿಳಿಯಲು ತಡವಾಗಲಿಲ್ಲ. ಸೌಮ್ಯ ಸ್ವಭಾವದ ಪ್ರಸನ್ನವದನದ ಯುವಕ.

ಕಳೆದ ರಾಷ್ಟ್ರಾಧ್ಯಕ್ಷರ ಕಾಲದಲ್ಲಿ ಗುನುಂಗ್ ಪದಾಂಗ್‌ಗೆ ಹೆಚ್ಚಿನ ಗಮನ ದೊರೆತಿತ್ತು. ಅದನ್ನು ಪ್ರವಾಸಿ ತಾಣವಾಗಿ ಪರಿವರ್ತಿಸುವ ಪ್ರಯತ್ನ ಕೂಡಾ ನಡೆದಿತ್ತು ಎಂದು ಓದಿದ್ದೆ. ಹಾಗೆಂದೇ, ಹೋಗಿ ತಲುಪುವುದು ಸುಲಭ ಎಂದು ನಾನು ಭಾವಿಸಿದ್ದೆ. ಕಾರು ಹೊರಟಿತು. ಚಾಲಕ ಡೀಯನ್ ಗೂಗಲ್ ತೋರಿದ ನೀಲಿ ಹಾದಿಯಲ್ಲಿ ಅತ್ತ ಇತ್ತ ನೋಡದೆ ನಡೆದಿದ್ದರು. ಅರ್ಧ ಗಂಟೆಯಲ್ಲಿ ಊರ ಹೊರಗಿನ ಟೋಲ್ ರಸ್ತೆಗೆ ಬಂದೆವು. ಆತ ರಂಜಾನ್‌ನ ಉಪವಾಸದಲ್ಲಿದ್ದರು. ನಮಗೋ ಗುನುಂಗ್ ಪದಾಂಗ್ ತಲುಪದ ಹೊರತು ಹೊಟ್ಟೆ ಹಸಿಯದು. ಒಂದಾದ ಮೇಲೊಂದು ಟೋಲ್ ರಸ್ತೆಯಲ್ಲಿ ಕಾರು ಸಾಗಿತ್ತು. ಹಚ್ಚ ಹಸಿರನ ನಡುವೆ ಮಲಗಿದ ಕೆಂಪು ಹೆಂಚಿನ ಸುಂದರವಾದ ಪುಟ್ಟ ಹಳ್ಳಿಗಳನ್ನು ನೋಡುತ್ತಾ ಸಾಗಿದ್ದೆವು. ಕೆಲವೆಡೆ ನಾನು ಸ್ವಿಟ್ಜರ್‌ಲ್ಯಾಂಡ್‌ನಲ್ಲಿದ್ದೇನೆ ಅನಿಸುತ್ತಿತ್ತು. ಇನ್ನು ಕೆಲವೆಡೆ ಇಲ್ಲೇ ಕೇರಳದಲ್ಲೋ, ಕೊಡಗಿನಲ್ಲೋ ಹಾಯುತ್ತಿರುವೆ ಎಂಬಂತಹ ಭಾವ. 10 ಗಂಟೆಯ ಹೊತ್ತಿಗೆ ಸೂಬಂಗ್ ಎಂಬ ಸ್ಥಳಕ್ಕೆ ಬಂದಿದ್ದೆವು. ಇನ್ನೊಂದು ಗಂಟೆಯೊಳಗೆ ತಲುಪುತ್ತೇವೆ ಎಂಬ ಭರವಸೆಯಲ್ಲಿ ಕುಳಿತಿದ್ದೆವು.

ಸ್ವಲ್ಪ ಹೊತ್ತಿಗೆ ಕಡುನೀಲಿ ಮತ್ತು ಹಸಿರಿನ ಬೆಟ್ಟಗಳು ಒಂದರ ಹಿಂದೊಂದು ಎದುರಿಗೇ ಸಾಲುಗಟ್ಟಿ ನಿಂತು ಅತ್ಯಂತ ಮೋಹಕವಾಗಿ ಆಹ್ವಾನಿಸುತ್ತಿದ್ದವು. ಸಮಯ 10.45; ಚಿಯಂಜೂರ್‌ಗೆ ಬಲಕ್ಕೆ ತೋರಿದ ಬಾಣದ ಗುರುತು ಹಾದಿ ಫಲಕದಲ್ಲಿ ಕಂಡಿತು. ಡೀಯನ್ ತನ್ನ ಗೂಗಲ್ ಬ್ರಹ್ಮನನ್ನೇ ನೋಡುತ್ತಾ ಅತ್ತ ತಲೆ ಎತ್ತಿಯೂ ನೋಡದೆ, ಮುಂದೆ ಸಾಗಿದ. ಬೆಟ್ಟಗಳು ಹತ್ತಿರವಾದವು. ಮತ್ತೊಂದು ಟೋಲ್ ರಸ್ತೆಯೂ ಮುಗಿಯಿತು. ಇದೀಗ ಕಾರು ಬೆಟ್ಟ ಗುಡ್ಡಗಳ ಕಣಿವೆಯಲ್ಲಿ ಏರಿಳಿಯತೊಡಗಿತು. ನಡುವೆ ನೂರೊಂದು ಪುಟ್ಟ ಪುಟ್ಟ ಹಳ್ಳಿಗಳನ್ನು ಹಾದು ಹೊರಟೆವು. ಜೀವಂತ ಹಳ್ಳಿಗಳು ಇಂಡೊನೇಷಿಯಾದ ಅಂತರಾಳವನ್ನೇ ತೆರೆದಿಟ್ಟ ಸಂತಸದ ಪಯಣ.

ಈಗ ಸೂರ್ಯ ನೆತ್ತಿಯ ಮೇಲಿದ್ದ, ಏರು ಮಧ್ಯಾಹ್ನ; ಆದರೆ ಗುನುಂಗ್ ಪದಾಂಗ್ ಎಲ್ಲಿ?

ನಾಲ್ಕು ಗಂಟೆಗಳು ಕಳೆದಿವೆ. ಈತನ ಗೂಗಲ್‌ನ ನೀಲಿ ಹಾದಿ ಸಾಗಿಯೇ ಇದೆ, ತಲುಪಲೇ ಒಲ್ಲದು. ತಂತ್ರಜ್ಞಾನದ ಲಾಭ ಮತ್ತು ತೊಂದರೆ ಎರಡೂ ನನಗೆ ತಿಳಿದಿದೆ. 'ಯಾರನ್ನಾದರೂ ಕೇಳಪ್ಪ?' ನಾನು ಹೇಳಿದೆ, ಈತ ಕೇಳಲೊಲ್ಲ. ತನ್ನ ಗೂಗಲ್ ಹೊರತು ಬೇರೊಬ್ಬ ಭಗವಂತನನ್ನು ಬಲ್ಲವನಲ್ಲ. ಓಡಿಯೇ ಓಡಿದ್ದ ಗಾಡಿ ಒಂದೆಡೆ ದಢಾರ್ ಎಂದು ನಿಲ್ಲಲೇಬೇಕಾಯಿತು. ಮುಂದೆ ದಾರಿಯೇ ಇರಲಿಲ್ಲ! ಬಲಕ್ಕೆ ಒಂದು ಮಾಧ್ಯಮಿಕ ಶಾಲೆ ಕಂಡಿತು. ಗಾಡಿಯನ್ನು ಆ ಕಿರಿದು ಹಾದಿಯಲ್ಲಿ ತಿರುಗಿಸಿ ಮುರುಗಿಸಿ, ಹಿಂದಕ್ಕೆ ತಂದು ಮತ್ತೆ ಕಣಿವೆ ಬೆಟ್ಟಗಳ ಹಾದಿಗಿಳಿದೆವು. ಅತ್ಯಂತ ಮನೋಹರ ಪ್ರಕೃತಿ, ಆದರೆ ನನಗೀಗ ಅದರತ್ತ ಗಮನವಿರಲಿಲ್ಲ.

ಹೀಗೇ ಸಾಕಷ್ಟು ಅಲೆದ ಮೇಲೆ ಮತ್ತೆ ನಾವು ತಟಸ್ಥ ನಿಲ್ಲಲೇಬೇಕಾಯಿತು. ಎದುರಿಗೆ ರಸ್ತೆ ಮಾಯವಾಗಿತ್ತು, ಅಲ್ಲೊಂದು ಕೊಚ್ಚೆಗುಂಡಿಯಿತ್ತು. ಅತ್ತಲಿಂದ ಬಂದ ಇಬ್ಬರು ಮನುಷ್ಯರನ್ನು ತಡೆದು ನಾನು ಕೇಳಿದೆ. 'ಅಯ್ಯೋ, ಅದು ಇರೋದು ಆ ಕಡೆ, ಬನ್ನಿ ತೋರಿಸುತ್ತೇವೆ' ಎಂದೇನೋ ಹಾವಭಾವದಲ್ಲಿ ಹೇಳಿದ್ದು ಅರ್ಥವಾಯಿತು.

ಬಲು ಕಷ್ಟದಿಂದ ಕಾರನ್ನು ರಿವರ್ಸ್ ಮಾಡಿಕೊಂಡು, ಮತ್ತೆ ಹೊರಟೆವು — ಏರುತಗ್ಗು